# ಶಿವ ದರುಶನ ನಮಗಾಯಿತು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 07.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 119.
3. **Note:** Lyrics in Ref. 1 and Ref. 2 are fully same. Singer has followed these wordings.

ರಾಗ: ಮಧ್ಯಮಾವತಿ ತಾಳ: ಆದಿ

ಶಿವ ದರುಶನ ನಮಗಾಯಿತು ಕೇಳೆ
ಶಿವರಾತ್ರಿಯ ಜಾಗರಣೆ || ಪ ||

ಪಾತಾಳ ಗಂಗೆಯ ಸ್ನಾನವ ಮಾಡಲು
ಪಾತಕವೆಲ್ಲ ಪರಿಹಾರವು
ಜ್ಯೋತಿರ್ಲಿಂಗನ ಧ್ಯಾನವ ಮಾಡಲು
ದ್ಯೂತಗಳಿಲ್ಲ ಅನುದಿನವು || 1 ||

ಬೇಡಿದ ವರಗಳ ಕೊಡುವನು ತಾಯಿ
ಬ್ರಹ್ಮನ ರಾಣಿಯ ನೋಡುವನು
ಆಡುತ ಪಾಡುತ ಏರುತ ಬಸವನ
ಆನಂದದಲಿ ನಲಿದಾಡುವನು || 2 ||

ಶಿಖರವು ಕಂಡೆನು ಪುರಂದರ ವಿಠಲನ
ಹರಿನಾರಾಯಣ ಧ್ಯಾನದಲಿ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಜ್ಯೋತಿರ್ಲಿಂಗ** – ಪಂಚತತ್ತ್ವಗಳಿಗೆ ಅನುಗುಣವಾಗಿ ಪಂಚ ಲಿಂಗಗಳನ್ನು ಹೇಳುವ ಪ್ರಕ್ರಿಯೆಯಿದೆ. 'ಜ್ಯೋತಿರ್ಲಿಂಗ' ಅಗ್ನಿತತ್ತ್ವವನ್ನು ಪ್ರತಿನಿಧಿಸುತ್ತದೆ.

**ದ್ಯೂತಗಳಿಲ್ಲ –** ಹೆಣಗಾಟವಿಲ್ಲ.

**ಬ್ರಹ್ಮನ ರಾಣಿಯ ನೋಡುವನು –** ರುದ್ರನು ಐದನೆಯ ಕಕ್ಷೆಯಲ್ಲಿದ್ದು, ತನ್ನ ಮೇಲಿನ ಕಕ್ಷೆಯಲ್ಲಿ ಉತ್ತಮಳಾದ ಸರಸ್ವತಿಯನ್ನು ಸನ್ನಿಧಾನಾಪೇಕ್ಷೆಯಿಂದ ನೋಡುವನು. ರುದ್ರನಿಗೆ ಸರಸ್ವತಿಯ ಮೂಲಕವಾಗಿ ಬ್ರಹ್ಮ, ಬ್ರಹ್ಮನ ಮೂಲಕವಾಗಿ ಲಕ್ಷ್ಮಿ, ಲಕ್ಷ್ಮಿಯ ಮೂಲಕವಾಗಿ ವಿಷ್ಣುವಿನ ಸೇವೆ ಸಿದ್ಧವಾಗುತ್ತದೆ.

**Classification:** Keerthane
**Ankita:** purandara vittala
**Location:** NA
**Category:** Shiva Stuti
**Sub-Category:** krishna, shiva, gange, snana, Dhyana, brahma, ADu, Ananda, parvata, Narayana, Krishna, saraswati,
**Pravachana:** NA
**Explanation:** NA